ಉತ್ತರ ಕನ್ನಡ ಜಿಲ್ಲೆಯಲ್ಲಿ ನೌಕಾಂಗಣ ಯೋಜನೆ

೧೪೫೩. ಶ್ರೀ ಜಿ. ಎಸ್. ಹೆಗಡೆ ಅಜ್ಜಿಬಾಳ (ಅಂಕೋಲ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ನೌಕಾಂಗಣವನ್ನು ಕಟ್ಟಲು ಮತ್ತು ಅದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಕಾರವಾರ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಕಾರವಾರ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ತೊಂದರೆಗಳಿಗೊಳಗಾಗುವ ಜನರೆಷ್ಟು ?

ಇ) ಜಮೀನು ಮತ್ತು ಪರಿಹಾರ ಧನವನ್ನು ಸರ್ಕಾರವು ತೊಂದರೆಗಳಿಗೊಳಗಾದ ಜನರಿಗೆ ಕೊಡುತ್ತದೆಯೇ ?

ಈ) ಪರಿಹಾರ ಹಣವನ್ನು ಯೋಜನೆಯ ಖರ್ಚಿನಲ್ಲಿ ಭರಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೇಳಿದೆಯೇ ?

ಉ) ಯೋಜನೆಯ ಕೆಲಸವನ್ನು ಪ್ರಾರಂಭಿಸುವ ಮುನ್ನ ತೊಂದರೆಗೀಡಾದವರಿಗೆ ಪುನರ್ವಸತಿಯ ಸೌಕರ್ಯವನ್ನು ಕಲ್ಪಿಸಲಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಅನಧಿಕೃತವಾಗಿ ನೌಕಾಂಗಣವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲು ಕೇಂದ್ರ ಸರಕಾರವು ಒಪ್ಪಿದೆ. ಈ ಯೋಜನೆಗೆ ಬೇಕಾದ ಭೂಮಿಯ ಆಯ್ಕೆಯ ವಿಷಯವು ಕೇಂದ್ರ ಸರಕಾರ/ನೌಕಾಧಿಕಾರಿಗಳೊಡನೆ ಸಮಾಲೋಚನೆಯಲ್ಲಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸರ್ಕಾರಿ ಭೂಮಿಯು ಕೊರತೆಯಿರುವುದರಿಂದ ನಿರಾಶ್ರಿತರಿಗೆ ಬದಲಿ ಜಮೀನು ಕೊಡುವುದನ್ನು ಕಾರ್ಯಗತ ಮಾಡುವುದು ಕಷ್ಟವು ಆಲ್ಲದೆ, ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಸಾಗುವಳಿ ಮಾಡಲು ಅರಣ್ಯ ಸಂಪತ್ತನ್ನು ಸಂರಕ್ಷಣೆಯ ಪ್ರಯುಕ್ತ ಕೊಡುವುದು ಸರಿಯಾಗುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಜೊತೆ ಪುನರ್ವಸತಿಯ ಖರ್ಚನ್ನು ಯೋಜನೆಯ ಖರ್ಚಿನಲ್ಲಿ ಸೇರಿಸಲು ಮಾತುಕತೆ ನಡೆಯುತ್ತಿದೆ.

ಈ) ಭೂ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳ ಪರಿಹಾರ ಧನವು ಯೋಜನೆ ಖರ್ಚಿನಲ್ಲಿ ಭರಿಸಲಾಗುವುದು.

ಉ) ಮೇಲೆ ಸೂಚಿಸಿರುವಂತೆ ಪುನರ್ವಸತಿಯ ಬಗ್ಗೆ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಯುತ್ತಿದೆ.

ವರಾಹಿ ಯೋಜನೆಯಡಿಯಲ್ಲಿ ಮುಳುಗಡೆಯಾದ ರೈತರ ಜಮೀನುಗಳಿಗೆ ಪರಿಹಾರ ಧನ

೧೯೭೩. ಶ್ರೀ ಕಟ್ಟಮನಿ ರತ್ನಾಕರ (ತೀರ್ಥಹಳ್ಳಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವರಾಹಿ ಮುಳುಗಡೆ ರೈತ ಕುಟುಂಬಗಳಿಗೆ ಪರಿಹಾರದ ಹಣ ಪಡೆಯಲು ವಿಳಂಬವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ತ್ವರಿತವಾಗಿ ಪರಿಹಾರ ಒದಗಿಸಲು ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು.—

ಅ) ಹೌದು.